ಅವರು ತಿರುಗಿ ಕಾರಿಡಾರಿಗೆ ಕಾಲಿಟ್ಟರು. ಮರಣದಂಡನೆಗೆ ಒಳಗಾಗಿದ್ದ ಉಳಿದ ಏಳೂ ಜನ ಅದನ್ನು ಅರ್ಥ ಮಾಡಿಕೊಂಡರು. ಲಿಂಬೋಲೇನ್ ಅಂದರೆ ಜಗತ್ತಿನ ಹೊರಗುಳಿದ ಮತ್ತೊಂದು ಜಗತ್ತು. ಅಲ್ಲಿ ಹೇಗೆಂದರೆ, ಯಾರಿಗಾದರೂ ಜ್ಞಾನೇಂದ್ರಿಯಗಳಲ್ಲಿ ಒಂದೆರಡು ಕೈಕೊಟ್ಟರೆ ಉಳಿದ ಇಂದ್ರಿಯಗಳಿಂದ ಆ ಕೊರತೆ ನೀಗುತ್ತದೆ. ಅವರಲ್ಲಿ ಪ್ರತಿಯೊಬ್ಬನಿಗೂ ಎಂಟು ಗಂಟೆಯಾಗುತ್ತಿದೆಯೆಂದೂ ಮರ್ರೆ ಎಂಟು ಗಂಟೆಗೆ ಖುರ್ಚಿಗೆ ಹೋಗಲಿರುವನೆಂದೂ ತಿಳಿಯಿತು.



ಆದ್ದರಿಂದ, ಇಬ್ಬರು ಕಾವಲುಗಾರರ ನಡುವೆ ಕ್ರಮಬದ್ಧವಾಗಿ ಹೆಜ್ಜೆ ಹಾಕುತ್ತಿದ್ದ ಮರ್ರೆಗೆ ಏಳು ಜನರಲ್ಲಿ ಮೂವರು ಮಾತ್ರ 'ಹ್ಯಾಪಿ ಜರ್ನಿ' ಎಂದರು. ಉಳಿದವರು ತಮ್ಮ ಸೆಲ್‌ಗಳಲ್ಲಿ ಉರಿಯುತ್ತ ಸುಮ್ಮನೆ ಕುಳಿತಿದ್ದರು. ಇಷ್ಟಾದರೂ ಕೂಡ ಮರ್ರೆ ಕ್ಷೋಭೆಗೆ ಒಳಗಾಗಿರಲಿಲ್ಲ. ಅವನಲ್ಲಿ ಅನಾಸಕ್ತಿಯೇ ಕಾಣುತ್ತಿತ್ತು. ಅದು ಅವನಿಗೂ ಅಚ್ಚರಿ ಹುಟ್ಟಿಸಿತ್ತು. ಶಿಕ್ಷೆ ಜಾರಿಯಾಗಬೇಕಾದ ಕೊಠಡಿಯಲ್ಲಿ ಸುಮಾರು ಇಪ್ಪತ್ತು ಜನರಿದ್ದರು. ಸೆರೆಮನೆಯ ಅಧಿಕಾರಿಗಳು, ವರದಿಗಾರರು, ಹಾಗೂ ಪ್ರೇಕ್ಷಕರು...'

★★★

(ಇಷ್ಟು ಬರೆಯುವ ಹೊತ್ತಿಗೆ ಕತೆಗಾರನಿಗೆ ಸಾವು ಬಂದಿತ್ತು. ತನ್ನ ಹಿಂದಿನ ಎಲ್ಲ ಕತೆಗಳಿಗಿಂತ ಈ ಕತೆ ಭಿನ್ನವಾಗಿರಬೇಕೆಂದು ಯೋಚಿಸಿದ್ದ ಅವನಿಗೆ ಈ ಸಾವು ಅನಿರೀಕ್ಷಿತವಾಗಿತ್ತು. ಹೊಸ ರೀತಿಯ ಕತೆಗಾಗಿ ಆತ ಒಂದು ಹೊಸ ವಿನ್ಯಾಸವನ್ನು ಸಿದ್ಧ ಮಾಡಿಕೊಂಡಿದ್ದ. ಅದರ ಟಿಪ್ಪಣಿ ಕೂಡ ಆತನ ಎದುರಿತ್ತು. ಅದರಲ್ಲಿ ಅವನ ಒಂದಷ್ಟು ಮಾತುಗಳು ಹೀಗಿದ್ದವು 'ನಾನು ನವನವೀನವಾದುದನ್ನು ಬರೆಯಬಲ್ಲೆ ಎಂದು ನನ್ನ ಓದುಗರಿಗೆ ತೋರಿಸಬೇಕು; ಅರ್ಥಾತ್ ನನ್ನ ಮುಂದಿನ ಕತೆಗಳಲ್ಲಿ ಗ್ರಾಮ್ಯ ಮಾತು ಇರುವುದಿಲ್ಲ, ನಿಜವಾದ ಕತೆ ಹೇಗಿರಬೇಕು ಎಂದು ನನ್ನ ಕಲ್ಪನೆಯಿದೆಯೋ ಅದಕ್ಕೆ ಹತ್ತಿರವಾಗುವಂತೆಯಾದರೂ ಕತೆಯನ್ನು ನೇರವಾಗಿ ಸರಳವಾಗಿ ನಿರೂಪಿಸಬೇಕು.' ಈ ಕತೆಗೆ ಮುನ್ನ ಕತೆಯ ರೂಪರೇಷೆಯನ್ನು ಓ. ಹೆನ್ರಿ ಹೀಗೆ ಟಿಪ್ಪಣಿ ಮಾಡಿಕೊಂಡಿದ್ದ).

## ಕತೆಯ ಟಿಪ್ಪಣಿ

'ಮರ್ರೆ ತಾನು ಪ್ರೀತಿಸಿದ ಹುಡುಗಿಯನ್ನು ಅಸೂಯೆಯ ಸಿಟ್ಟಿನಲ್ಲಿ ಕೊಲೆ ಮಾಡಿ, ಮರಣದಂಡನೆಗೆ ಗುರಿಯಾದವನು. ತೀರ್ಪನ್ನು ಮೊದಲು ಶಾಂತವಾಗಿ ಹೊರ ನೋಟದಲ್ಲಿ ಕಾಣುವಂತೆ ತನ್ನ ವಿಧಿಯ ಬಗ್ಗೆ ಅನಾಸಕ್ತಿಯಿಂದ ಆತ ಎದುರಿಸುತ್ತಾನೆ. ಎಲೆಕ್ಟ್ರಿಕ್ ಕುರ್ಚಿಯ ಬಳಿ ಸರಿಯುತ್ತಿದ್ದಂತೆ ಅನಿರೀಕ್ಷಿತವಾಗಿ ಭಾವಾವೇಶಕ್ಕೆ ಸಿಕ್ಕಿಕೊಳ್ಳುತ್ತಾನೆ. ಅವನಿಗೆ ಮಂಕು